ಕೊಡುತ್ತೇನೆ. ಸರ್ವೇ ಬಂದ ಮೇಲೆ ಸರ್ಕಾರ ಮಂಜೂರಾತಿಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಮೋಹನ್ ಕೆ.ಶೆಟ್ಟಿ: ನಾವು ಒಳಚರಂಡಿ ವ್ಯವಸ್ಥೆ ಬಗ್ಗೆ ಕೇಳಿದರೆ, ಕುಡಿಯುವ ನೀರಿನ ಬಗ್ಗೆ ಅವರು ಹೇಳುತ್ತಿದ್ದಾರೆ. ಅದೂ ಕೂಡ ಸುಳ್ಳು ಹೇಳುತ್ತಿದ್ದಾರೆ. ನಾಲ್ಕು ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಅದರಲ್ಲಿ ಎಲ್ಲಾ ಖರ್ಚಾಗಿದೆ, ಇದರಲ್ಲಿ ಪುರಸಭೆ ಪಾಲೂ ಕೂಡ ಇದೆ. ಆದರೂ ನೀರಿನ ಯೋಜನೆ ಇನ್ನೂ ಸಮರ್ಪಕವಾಗಿ ಆಗಿಲ್ಲ. ಏಕೆಂದರೆ, ಹಿಂದೆ ನಮ್ಮಲ್ಲಿ ಬೋರ್‌ವೆಲ್ ಸಿಸ್ಟಮ್ ಇತ್ತು, ಈಗ ಹೊಸ ಸಿಸ್ಟಮ್ ಬಂದಿರುವುದರಿಂದ ಅದಕ್ಕೆ ತಕ್ಕ ಡಿಸ್ಟ್ರಿಬ್ಯೂಷನ್ ಮಾಡಿಲ್ಲ, ಅದಕ್ಕೆ ತಕ್ಕ ಟ್ಯಾಂಕ್ ಮಾಡಿಲ್ಲ, ಪಂಪ್ ಮಾಡಿಲ್ಲ, ಅದನ್ನೂ ಕೂಡ ಮಾಡಿಕೊಡಬೇಕು. ಯಾವಾಗ ಈ ಯೋಜನೆ ಜಾರಿಗೆ ತರುತ್ತೀರೆಂದು ಹೇಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ನಾನು ಎರಡು ಪಟ್ಟಣಗಳನ್ನು ಸೇರಿಸಿ 10 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದೆ. ಹೊನ್ನಾವರದಲ್ಲಿ ಸುಮಾರು 10 ಕೋಟಿ ರೂಪಾಯಿಗಳು, ಕುಮಟಾದಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಯುಜಿಡಿ ಆದಷ್ಟು ಬೇಗ ಇದನ್ನು ಸರ್ವೇ ಮಾಡಿ ತರಿಸಿದ ಮೇಲೆ ಮಂಜೂರಾತಿ ಕೊಡತಕ್ಕಂತಹ ಕೆಲಸ ಮಾಡುತ್ತೇವೆ.

ಕಾರಂಜಾ ಅಣೆಕಟ್ಟು ಯೋಜನೆಯಲ್ಲಿ ಖಾಲಿ ಇರುವ ಹುದ್ದೆಗಳು.

343(3462)

ಶ್ರೀ ಸುಭಾಷ್ ಕಲ್ಲೂರ್(ಹುಮ್ನಾಬಾದ್): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ ಅಣೆಕಟ್ಟು ಯೋಜನೆಯ ಕಾಮಗಾರಿಗಳಿಗಾಗಿ ನಿರ್ವಹಿಸಲು ಮಂಜೂರಾಗಿರುವ ವಿವಿಧ ಹಂತದ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು?

ಆ) ಎಲ್ಲ ಹಂತದ ಇಂಜಿನಿಯರ್‌ಗಳ ಹಾಲಿ ಇರುವ ಸಂಖ್ಯೆ ಎಷ್ಟು? ದರ್ಜೆವಾರು ವಿವರ ನೀಡಿ?

ಇ) ಸದರಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ಇವು ಯಾವಾಗಿನಿಂದ

ಖಾಲಿ ಇವೆ?

ಈ) ಖಾಲಿ ಇರಲು ಕಾರಣಗಳೇನು? ಮಂಜೂರಾದ ಹುದ್ದೆಗೂ, ಹಾಲಿ ಇರುವ ಹುದ್ದೆಗೂ ವ್ಯತ್ಯಾಸ ಇಲ್ಲವೇ? ಇದ್ದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಕೆ.ಪಾಟೀಲ್ (ಜಲಸಂಪನ್ಮೂಲ ಸಚಿವರು):

ಅ) 107

ಹುದ್ದೆವಾರು ವಿವರಗಳು ಕೆಳಗಿನಂತಿವೆ

1) ಅಧೀಕ್ಷಕ ಇಂಜಿನಿಯರ್	- 01
2) ಕಾರ್ಯಪಾಲಕ ಇಂಜಿನಿಯರ್	- 03
3) ಸಹಾಯಕ ಕಾರ್ಯಪಾಲಕ ಇಂಜಿನಿಯರ್	- 13
4) ಸಹಾಯಕ ಇಂಜಿನಿಯರ್	- 61
5) ಕಿರಿಯ ಇಂಜಿನಿಯರ್	- 29

ಆ) 60

1) ಅಧೀಕ್ಷಕ ಇಂಜಿನಿಯರ್	- 01
2) ಕಾರ್ಯಪಾಲಕ ಇಂಜಿನಿಯರ್	- 01
3) ಸಹಾಯಕ ಕಾರ್ಯಪಾಲಕ ಇಂಜಿನಿಯರ್	- 08
4) ಸಹಾಯಕ ಇಂಜಿನಿಯರ್	- 27
5) ಕಿರಿಯ ಇಂಜಿನಿಯರ್	- 23

(ದಿನಾಂಕ:12-7-2001 ರಂದು ನೇಮಿಸಿದ ಹುದ್ದೆಗಳೂ ಸೇರಿದಂತೆ)

ಇ) 47

1) ಅಧೀಕ್ಷಕ ಇಂಜಿನಿಯರ್ - 00

2) ಕಾರ್ಯಪಾಲಕ ಇಂಜಿನಿಯರ್ - 02

3) ಸಹಾಯಕ ಕಾರ್ಯಪಾಲಕ ಇಂಜಿನಿಯರ್ - 05

4) ಸಹಾಯಕ ಇಂಜಿನಿಯರ್ - 34

5) ಕಿರಿಯ ಇಂಜಿನಿಯರ್ - 06

ಈ ಹುದ್ದೆಗಳು ಸುಮಾರು ಒಂದೂವರೆ ವರ್ಷದಿಂದ ಎರಡು ವರ್ಷಗಳವರೆಗೆ ಖಾಲಿ ಇವೆ.

ಈ) ಕಾರಂಜಾ ಯೋಜನೆಯಲ್ಲಿ ನಡೆಯುತ್ತಿವೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಲ್ಲಾ ತಾಂತ್ರಿಕ ಸಿಬ್ಬಂದಿಗಳನ್ನು ಅಲ್ಲಿಂದ ವರ್ಗಾಯಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡು ಹಿಂದಿನ ಸಾಲಿನಲ್ಲಿ ಅಲ್ಲಿನ ಎಲ್ಲಾ ತಾಂತ್ರಿಕ ಸಿಬ್ಬಂದಿಗಳನ್ನು ವರ್ಗಾಯಿಸಲಾಗಿದೆ ಹಾಗೂ ಬೇರೆ ಅಧಿಕಾರಿಗಳನ್ನು ನಿಯೋಜಿಸಿದೆ. ಆದರೂ ನೀರಾವರಿ ಇಲಾಖೆಯ ಬಹಳಷ್ಟು ಹುದ್ದೆಗಳು ಖಾಲಿ ಇರುವುವು. ನಿಯೋಜಿಸಿದ ಕೆಲವು ಅಧಿಕಾರಿಗಳು ಸೇವೆಯಿಂದ ವಯೋ ನಿವೃತ್ತಿ ಹೊಂದಿರುತ್ತಾರೆ ಮತ್ತು ಕೆಲವರನ್ನು ಅಮಾನತ್ತಿನಲ್ಲಿಟ್ಟಿರುವುದರಿಂದ ಸ್ವಲ್ಪಮಟ್ಟಿಗೆ ತಾಂತ್ರಿಕ ಹುದ್ದೆಗಳು ಖಾಲಿ ಇವೆ. ಕಾರಂಜಾ ಯೋಜನೆಗೆ ಒಟ್ಟು ಮಂಜೂರಾದ 107 ತಾಂತ್ರಿಕ ಹುದ್ದೆಗಳಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ-41. ಇದಲ್ಲದೇ ದಿ:12-7-2001ರಂದು 15 ಜನ ಸಹಾಯಕ ಇಂಜಿನಿಯರ್ ಹಾಗೂ 4 ಜನ ಕಿರಿಯ ಇಂಜಿನಿಯರ್‌ರನ್ನು ಕಾರಂಜಾ ಯೋಜನೆಗೆ ವರ್ಗಾಯಿಸಲಾಗಿದೆ. ಹೀಗಾಗಿ ವ್ಯತ್ಯಾಸವಿದೆ. ನೀರಾವರಿ ಇಲಾಖೆಯಲ್ಲಿ 980 ಸಹಾಯಕ ಇಂಜಿನಿಯರ್‌ಗಳ ಹಾಗೂ 507 ಕಿರಿಯ ಇಂಜಿನಿಯರ್‌ಗಳ ಹುದ್ದೆಗಳು ಖಾಲಿ ಇದ್ದು 500 ಸಹಾಯಕ ಇಂಜಿನಿಯರ್‌ಗಳನ್ನು ಹಾಗೂ 250 ಕಿರಿಯ ಇಂಜಿನಿಯರ್‌ಗಳನ್ನು ನೇಮಕಾತಿ ಮಾಡುವ ಕುರಿತು ಕ್ರಮ ವಹಿಸಲಾಗುತ್ತಿದೆ. ಅಲ್ಲದೇ, ಸ್ವಲ್ಪಮಟ್ಟಿಗೆ ಕಾರಂಜಾದಲ್ಲಿ ವ್ಯತ್ಯಾಸವಿರುವ ಹುದ್ದೆಗಳನ್ನು ಭರ್ತಿ ಮಾಡಲು ಕಡಿಮೆ ಕೆಲಸ ಇರುವ ವೃತ್ತ ವಿಭಾಗ ಹಾಗೂ ಉಪ ವಿಭಾಗಗಳಿಂದ 15 ಸಹಾಯಕ ಇಂಜಿನಿಯರ್ ಹಾಗೂ 4 ಕಿರಿಯ ಇಂಜಿನಿಯರ್‌ಗಳನ್ನು ಸರ್ಕಾರದ ದಿನಾಂಕ:12-7-2001 ಅಧಿಸೂಚನೆಯಲ್ಲಿ ವರ್ಗಾಯಿಸಿ ನೇಮಿಸಲಾಗಿದೆ.

ಶ್ರೀ ಸುಭಾಷ್ ಕಲ್ಲೂರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಹಳ ಸಮಂಜಸವಾದ ಮತ್ತು ಸೂಕ್ತವಾದ ಉತ್ತರ ಒದಗಿಸಿದ್ದಾರೆ. ಇಲ್ಲಿರತಕ್ಕಂತಹ ಒಂದು

ಪ್ರಶ್ನೆ ಏನೆಂದರೆ, ಕಾರಂಜ ಯೋಜನೆಯಲ್ಲಿ 15 ದಿವಸಗಳೊಳಗೆ ಎರಡು ಸಾರಿ ನಮ್ಮ ಕಾರಂಜ ಡ್ಯಾಂಗೆ ಮಾನ್ಯ ಮಂತ್ರಿಗಳು ಏಸಿಟ್ ಕೊಟ್ಟಿದ್ದಾರೆ. ಕೆಲಸ ಬಹಳ ಬೇಗ ಮುಗಿಯುತ್ತದ ಎಂದು ನಮಗೆ ಭರವಸೆ ಕೂಡ ಇತ್ತು. ನಮ್ಮ ಕಾರಂಜ ಯೋಜನೆಯಲ್ಲಿರತಕ್ಕಂತಹ ಸ್ಟ್ಯಾಫ್ ಏವರಣ್ ನೋಡಿದರೆ, 107 ಮಂಜೂರಾತಿ ಹುದ್ದೆಗಳಿವೆ, ಅದರಲ್ಲಿ ಕೆಲಸ ಮಾಡತಕ್ಕಂತಹ ಸೂಪರಿಂಟೆಂಡೆಂಟ್ ಇಂಜಿನಿಯರ್ ಹುದ್ದೆ ಒಂದು ವರ್ಷದಿಂದ ಖಾಲಿ ಇದೆ. ಕಾರ್ಯ ನಿರ್ವಾಹಕ ಅಭಿಯಂತರರ ಹುದ್ದೆಗಳು ಮೂರು ಇದ್ದರೂ ಕೂಡ ಒಂದು ಇದೆ, ಅದೂ ಕೂಡ ಎರಡು ಮೂರು ತಿಂಗಳುಗಳಿಂದ ಖಾಲಿ ಇದೆ. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರ ಸ್ಯಾಂಕ್ಷನ್ ಪೋಸ್ಟ್‌ಗಳು 13 ಇವೆ, ಐದು ಪೋಸ್ಟ್ ಖಾಲಿ ಇವೆ, ಅದರಲ್ಲಿ ಇಬ್ಬರು ಸಸ್ಪೆಂಡ್ ಆಗಿದ್ದಾರೆ, ಮೂರು ಪೋಸ್ಟ್ ಖಾಲಿ ಇವೆ, ಒಟ್ಟನಲ್ಲಿ 60 ಹುದ್ದೆಗಳು ಖಾಲಿ ಇರುವುದರಿಂದ ಮಾನ್ಯ ಹೆಚ್.ಕೆ.ಪಾಟೀಲರು ಬಹಳ ಬೇಗ ಈ ಹುದ್ದೆಗಳನ್ನು ತುಂಬುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಕೆಲಸ ಮಾಡುವುದಕ್ಕೆ ಸ್ಟ್ಯಾಫ್ ಇಲ್ಲವೆಂದರೆ, ಕಾರಂಜ ಯೋಜನೆಯನ್ನು ಯಾವಾಗ ಮುಗಿಸುವುದು? ಇದನ್ನು ತಾವು ಯಾವಾಗ ತುಂಬುತ್ತೀರಿ ಎಂದು ನಿರ್ದಿಷ್ಟವಾದ ಸಮಯ ಹೇಳಿದರೆ ಈ ಪ್ರಾಜೆಕ್ಟ್ ಮುಗಿಯತಕ್ಕಂತಹ ಸಂಕಲ್ಪ ಮುಗಿಯುತ್ತದೆ. ನಮ್ಮ ಜಿಲ್ಲೆಯಲ್ಲಿ ಇರುವುದು ಒಂದೇ ಒಂದು ಡ್ಯಾಮ್. ಬೇರೆ ಯಾವುದೇ ಪ್ರಾಜೆಕ್ಟ್ ನಮ್ಮಲ್ಲಿ ಇಲ್ಲ. ಇದು ಒಂದೇ ಡ್ಯಾಂ ಕೆಲಸ ಸುಮಾರು 30 ವರ್ಷಗಳಿಂದ ನಡೆದಿದೆ ಎಂದು ಈಗಾಗಲೇ ಅವರಿಗೆ ಮಾಹಿತಿ ಬಂದಿದೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸುಭಾಷ್ ಕಲ್ಲೂರ್‌ರವರು ಹೇಳಿದ ಪ್ರಕಾರ ಕಾರಂಜ ಯೋಜನೆಯಲ್ಲಿ ಎಷ್ಟು ತಾಂತ್ರಿಕ ಸಿಬ್ಬಂದಿ ಇರಬೇಕಾಗಿತ್ತು ಅದಕ್ಕಿಂತ ಕಡಿಮೆ ಇದೆ, ಈ ಕೊರತೆಯನ್ನು ಮನಗಂಡ ಆ ಭಾಗದ ಶಾಸಕರು ನಮ್ಮ ಗಮನಕ್ಕೆ ತಂದರೂ ಅದರ ಅವಶ್ಯಕತೆ ಕೂಡ ಇತ್ತು. 19 ಜನರಲ್ಲಿ 15 ಜನ ಸಹಾಯಕ ಇಂಜಿನಿಯರ್‌ಗಳು ಹಾಗೂ ನಾಲ್ಕು ಕಿರಿಯ ಇಂಜಿನಿಯರ್‌ಗಳಿಗೆ 12ನೇ ತಾರೀಖಿಗೆ ಅಲ್ಲಿಗೆ ವರ್ಗಾವಣೆ ಮಾಡಿದ್ದೇವೆ. ನನ್ನ ವರದಿ ಪ್ರಕಾರ ಆ 16 ಜನ ಇಂಜಿನಿಯರ್‌ಗಳು ಅಲ್ಲಿ ರಿಪೋರ್ಟ್ ಮಾಡಿಕೊಂಡಿದ್ದಾರೆ. ಅದಲ್ಲದ ಕಾರ್ಯನಿರ್ವಾಹಕ ಅಧಿಕಾರಿಯನ್ನು ಕೂಡ ಅಲ್ಲಿ ಹಾಕುವುದಕ್ಕೆ ಈಗಾಗಲೇ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರ 5 ಹುದ್ದೆಗಳು ಕೂಡ ಖಾಲಿ ಇವೆ, ಅದರಲ್ಲಿ ಕನಿಷ್ಟ ನಾಲ್ಕನ್ನಾದರೂ ತಕ್ಷಣ ತುಂಬುತ್ತೇವೆ. ತಾಂತ್ರಿಕ ಸಿಬ್ಬಂದಿ ಕೊರತೆಯಿಂದ ಕೆಲಸದಲ್ಲಿ ಸ್ವಲ್ಪ ಮಟ್ಟಿನ ನಿಧಾನವಾಗಿರಬಹುದು. ಅದಕ್ಕಿಂತ ಹೆಚ್ಚಿಗೆ ಇನ್‌ಫಾರ್ಜ್ ವ್ಯವಸ್ಥೆಯಲ್ಲಿ ಇರತಕ್ಕಂತಹ ಕೆಲವರು ಅಲ್ಲಿ ಮಾಡಿರತಕ್ಕಂತಹ ಅವ್ಯವಹಾರದ ಸಲುವಾಗಿ ಈಗಾಗಲೇ ವಿಚಾರಣೆ ನಡೆದು

ಅವರನ್ನು ಸಸ್ಪೆಂಡ್ ಮಾಡಿದ್ದೇವೆ. ಬಹಳ ಜನರ ಮೇಲೆ ಶಿಸ್ತಿನ ಕ್ರಮ ನಡೆದಿದೆ. ಆ ಹಿನ್ನೆಲೆಯಲ್ಲಿ ಸಿಬ್ಬಂದಿ ಕೊರತೆಯಾಗಿದೆ. ಅದನ್ನು ಬಹಳ ಬೇಗ ಮುಗಿಸಬೇಕೆಂದು ನನ್ನ ಇಚ್ಛೆ ಕೂಡ ಆಗಿದ. ಅದರ ಸಲುವಾಗಿ ನಾನು ಶಾಸಕರ ಸಹಕಾರ ಕೋರಿದ್ದೇನೆ. ದುರಾದೃಷ್ಟವಶಾತ್ ಅಲ್ಲಿ ಮೇಲಿಂದ ಮೇಲೆ ಅವ್ಯವಹಾರ ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಈ ಅವ್ಯವಹಾರಗಳ ಬಗ್ಗೆ ತಾವು ಎಷ್ಟು ಸಲ ನನ್ನ ಗಮನಕ್ಕೆ ತಂದಿದ್ದೀರಿ, ನಾವು ಆ್ಯಕ್ಷನ್ ತೆಗೆದುಕೊಂಡಿದ್ದೇವೆ. ಅಲ್ಲಿ ಸ್ವಲ್ಪ ಹದಗೆಟ್ಟ ವಾತಾವರಣ ಇರುವುದರಿಂದ ಅತ್ಯಂತ ಕಠೋರವಾದ ಕ್ರಮ ತೆಗೆದುಕೊಂಡು, ಆ ಯೋಜನೆಯಲ್ಲಿ ಇನ್ನು ಮುಂದೆ ಯಾವುದೇ ಕಾರಣಕ್ಕೆ ಹಣ ಲೋಪ ಆಗದ ಹಾಗೆ ಅವ್ಯವಹಾರವಾಗದ ಹಾಗೆ ಎಲ್ಲಾ ಮುಂಜಾಗ್ರತೆ ವಹಿಸಿ ಎರಡು ವರ್ಷಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಚ್.ಕೆ.ಪಾಟೀಲರು ಕಾರಂಜ ಯೋಜನೆಯಲ್ಲಿ ನಡೆದ ಅವ್ಯವಹಾರದ ಬಗ್ಗೆ ಕೆಲವೊಂದು ಕ್ರಮಗಳನ್ನು ತೆಗೆದುಕೊಂಡಿದ್ದಾರೆ, ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಇವತ್ತು ಏನಾಗಿದೆ ಎಂದರೆ, ಕಾರಂಜ ಯೋಜನೆಯಲ್ಲಿ ತಾವು ಕೆಲವರಿಗೆ ಸಸ್ಪೆಂಡ್ ಮಾಡಿದಿರಿ, ಸಸ್ಪೆನ್‌ಷನ್ ಆದಮೇಲೆ ವೇಕೆನ್ಸಿ ಕ್ರಿಯೇಟ್ ಆಗಿ ಮುಂದಿನ ಕೆಲಸ ನಿಂತು ಹೋಗಿದೆ. ಸಸ್ಪೆನ್‌ಷನ್ ಆದವರು ಹೋದರೂ ಮತ್ತೆ ನೀವು ಅದನ್ನು ಫಿಲ್-ಅಪ್ ಮಾಡಲಿಲ್ಲ. ಇದರಿಂದ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ. 1972ನೇ ಇಸವಿಯಲ್ಲಿ 9 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಪ್ರಾರಂಭವಾದ ಈ ಯೋಜನೆಯಲ್ಲಿ ಈಗಾಗಲೇ 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು 100 ಕೋಟಿ ರೂಪಾಯಿಗಳು ಬೇಕೆಂದು ಒಂದು ಪ್ಲಾನ್ ಇದೆ. ಇದು ಎರಡು ವರ್ಷಗಳಿಂದ ತಮ್ಮ ಉತ್ತರದಲ್ಲಿದೆ. ಒಂದೂವರೆ, ಎರಡು ವರ್ಷಗಳಿಂದ ಅಲ್ಲಿ ವೇಕೆನ್ಸಿ ಖಾಲಿ ಇದೆ. ಅದನ್ನು ಯಾವಾಗ ಫಿಲ್-ಅಪ್ ಮಾಡುತ್ತೀರಿ? ಸ್ಪೆಸಿಫಿಕ್ಕಾಗಿ ಈ ಯೋಜನೆಯನ್ನು ಇಷ್ಟು ಅವಧಿಯಲ್ಲಿ ಮುಗಿಸುತ್ತೇವೆಂದು ಹೇಳಿದರೆ ಉತ್ತಮ. ಅವ್ಯವಹಾರ ಎಲ್ಲಿ ನಡೆದಿದೆ, ಫೀಸ್ ಬಿಲ್ ಕಂಟ್ಯಾಕ್ಟರ್ ಇರಬಹುದು, ಪರ್ಚೇಸ್‌ನಲ್ಲಿ ನಡೆದಿರಬಹುದು, ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ತಪ್ಪಿತಸ್ಥರನ್ನು ಬರೀ ಸಸ್ಪೆನ್‌ಷನ್ ಮಾಡಿದರೆ ನಡೆಯುವುದಿಲ್ಲ. ಸ್ವಲ್ಪಮಟ್ಟಿಗೆ ಸರ್ಚೀಸ್ ಟರ್ಮಿನೇಷನ್ ಮಾಡಿ, ಕ್ರಿಮಿನಲ್ ಕೇಸ್ ಹಾಕಿ ಜೈಲಿಗೆ ಕಳುಹಿಸಬೇಕು, ಆಂದಾಗ ಮಾತ್ರ ಬೇರೆಯವರಿಗೆ ಎಚ್ಚರಿಕೆ ಬರುತ್ತದೆ. ಸಸ್ಪೆನ್‌ಷನ್ ಆಗುತ್ತದೆ, ಮತ್ತೆ ಮುಂದಿನ ತಿಂಗಳಲ್ಲಿ ವಾಪಸ್ ಬರುತ್ತಾರೆ. ಒಳ್ಳೆಯ ಕೆಲಸ ಏನು ಮಾಡುತ್ತಿದ್ದೀರಿ, ಅದಕ್ಕೆ ಏನಾದರೂ ಗುಡ್ ಸಿಗ್ನಲ್ ಹೋಗಬೇಕಾದರೆ ಕೆಲವರಿಗೆ ನೀವು ಪನಿಷ್‌ಮೆಂಟ್ ಕೊಡುವುದು, ಕ್ರಿಮಿನಲ್ ಕೇಸ್ ಹಾಕುವುದು, ಜೈಲಿಗೆ ಕಳುಹಿಸುವ ಕೆಲಸ

ಮಾಡಬೇಕು. ಈ ರೀತಿಯ ಪ್ರಾಜೆಕ್ಟ್‌ನಿಂದ ಒಳ್ಳೆಯ ಸಿಗ್ನಲ್ ಹೋಗಲಿ. ಇದರ ಮುಖಾಂತರ ಏನು ಕ್ರಮಗಳನ್ನು ಕೈಗೊಂಡಿದ್ದೀರಿ, ಇದರಲ್ಲಿ ಮುಂದಿನ ಕೆಲಸಕ್ಕೆ ಯಾವುದೇ ತೊಂದರೆಯಾಗಬಾರದು. ತಕ್ಷಣ ವೇಕೆನ್ಸಿ ಫಿಲ್-ಅಪ್ ಮಾಡಿ. ಆದಷ್ಟು ಬೇಗ ಕೆಲಸ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಸನ್ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ಬಂದಿರಬಹುದು, ಈಗಾಗಲೇ ನಾವು ಕಾರಂಜ ಯೋಜನೆಯಲ್ಲಿ ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ಸಸ್ಪೆಂಡ್ ಮಾಡಿದ್ದೇವೆ. ಅವರ ಮೇಲೆ ಐ.ಪಿ.ಸಿ. ಕೋಡ್ ಪ್ರಕಾರ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ್ದೇವೆ. ಅದೇ ರೀತಿ ಇಬ್ಬರು ಎಕ್ಸಿಕ್ಯುಟಿವ್ ಇಂಜಿನಯರ್‌ಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಇವರಲ್ಲಿ ಒಬ್ಬರ ಮೇಲೆ ಕ್ರಿಮಿನಲ್ ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಇತ್ತೀಚೆಗೆ ತನಿಖಾ ವರದಿಯಾಗಿತ್ತು. ಆ ವರದಿ ಪ್ರಕಾರ ಅಲ್ಲೂ ಕೂಡ ಕ್ರಿಮಿನಲ್ ಆ್ಯಕ್ಷನ್‌ನ್ನು ಇನಿಶಿಯೇಟ್ ಮಾಡಿದ್ದೇವೆ. ಎಲ್ಲೆಲ್ಲಿ ಅವ್ಯವಹಾರ ಆಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆಯೋ ಆ ಸಂದರ್ಭಗಳಲ್ಲಿ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಆದಾಗ್ಯೂ ಕೂಡ ಸೆಕ್ಷನ್ 285ರ ಕೆಳಗಡೆ ಅಂಥವರನ್ನು ಮನೆಗೆ ಕಳುಹಿಸಬೇಕು ಎನ್ನುವ ಸಲಹೆಯನ್ನು ಕೊಟ್ಟಿದ್ದೀರಿ. ತಮ್ಮ ಸಲಹೆಯನ್ನು ನಾವು ಗಮನದಲ್ಲಿಟ್ಟುಕೊಂಡು ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನು ಎಷ್ಟು ಖಾಲಿ ಹುದ್ದೆಗಳಿವೆ ಎಂಬ ಬಗ್ಗೆ ತಾವು ಕೇಳಿದ್ದೀರಿ. ನಮ್ಮ ಇಲಾಖೆಯೊಳಗೆ 980 ಸಹಾಯಕ ಇಂಜಿನಿಯರ್ ಹುದ್ದೆಗಳು ಖಾಲಿ ಇವೆ. ಆದರೆ ಇಲ್ಲಿಯೂ ಕೂಡ ಅದೇ ಪ್ರಮಾಣದಲ್ಲಿ ಕಡಿಮೆ ಇರತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ ಅಲ್ಲಿರತಕ್ಕಂಥ ಇಂಜಿನಿಯರ್‌ಗಳ ಸಂಖ್ಯೆ ಏನಿದೆ ಅವರಿಂದಲೇ ಕೆಲಸ ಮಾಡಿಸಬಹುದಾದ ಸಣ್ಣ ಪ್ರಾಜೆಕ್ಟ್ ಅದಾಗಿದೆ. ಇದು ಸಣ್ಣ ಪ್ರಾಜೆಕ್ಟ್ ಆಗಿರುವುದರಿಂದ ಈಗಿರುವ ಸಿಬ್ಬಂದಿಗಿಂತ ಹೆಚ್ಚಿನ ಸಿಬ್ಬಂದಿ ಬೇಕೇ ಬೇಕು ಎನ್ನುವ ಪರಿಸ್ಥಿತಿ ಏನಿಲ್ಲ. ಈಗಾಗಲೇ ಅಧ್ಯಯನ ವರದಿಯ ಪ್ರಕಾರ ಹೇಳಿರುವಂತೆ ಕೆಲವು ಕಡೆ ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಗಳನ್ನು ಅನಾವಶ್ಯಕವಾಗಿ ಕ್ರಿಯೇಟ್ ಮಾಡಿದ್ದಾರೆ, ಕೆಲವು ಕಡೆ ಕೆಲಸ ಮುಗಿದಿದ್ದರೂ ಕೂಡ ಆ ಪೋಸ್ಟ್‌ನ್ನು ಹಾಗೆಯೇ ಇಟ್ಟುಕೊಂಡು ಮುಂದುವರೆದಿದ್ದೇವೆ. ಆದರೂ ಕೂಡ ಇನ್ನು ಎಷ್ಟು ಹುದ್ದೆಗಳು ಅವಶ್ಯಕವಾಗಿ ಬೇಕಾಗುತ್ತದೋ ಅದನ್ನು ಇನ್ನು ಒಂದು ತಿಂಗಳೊಳಗಾಗಿ ತುಂಬುತ್ತೇವೆ ಎನ್ನುವಂಥ ಭರವಸೆ ಕೊಡುತ್ತೇನೆ.

ಶ್ರೀ ಸುಭಾಷ್ ಕಲ್ಲೂರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ವರ್ಷ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಒಂದು ವರದಿಯನ್ನು ಕೊಟ್ಟು ಅವ್ಯವಹಾರದ ಬಗ್ಗೆ ತಿಳಿಸಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿದ್ದಾರೆ. ಆ

ವರದಿಯ ಆಧಾರದ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಅಂಥ ಅಧಿಕಾರಿಗಳ ಮೇಲೆ ಕಠಿಣ ಶಿಸ್ತಿನ ಕ್ರಮ ತೆಗೆದುಕೊಳ್ಳುವುದೋ ಅಥವಾ ಜೈಲಿಗೆ ಕಳುಹಿಸತಕ್ಕಂಥ ಕೆಲಸವನ್ನೋ ಒಟ್ಟಾರೆ ಯಾವುದಾದರೂ ಒಂದು ರೀತಿಯ ಶಿಕ್ಷೆ ವಿಧಿಸಲೇಬೇಕು. ಆ ರೀತಿ ಮಾಡಿದರೆ ಭಯದ ವಾತಾವರಣ ಅಧಿಕಾರಿಗಳಲ್ಲಿ ಬರುತ್ತದೆ. ಇಲ್ಲದಿದ್ದರೆ ಅವ್ಯವಹಾರ ಮಾಡಲು ಭಯವೇ ಅವರಿಗೆ ಇರುವುದಿಲ್ಲ. ಕಾರಂಜಾ ಯೋಜನೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಹಾಕದಿದ್ದರೆ ಇನ್ನು ಹತ್ತು ವರ್ಷವಾದರೂ ಕೂಡ ಈ ಪ್ರಾಜೆಕ್ಟ್ ಮುಗಿಯಲು ಆಗುವುದಿಲ್ಲ. ಮಾನ್ಯ ಸಚಿವರೇನು 10 ಕಿ.ಮೀ. ತನಕ ನೀರು ಕೊಡುತ್ತೇವೆ ಎಂದಿದ್ದರು ಅದರಲ್ಲಿ ಈಗಾಗಲೇ 5 ಕಿ.ಮೀ.ವರೆಗೆ ನೀರು ಬಂದಿದ್ದು ಇನ್ನುಳಿದ 5 ಕಿ.ಮೀ.ನಲ್ಲೂ ನೀರು ಬಂದರೆ ಹತ್ತು ಸಾವಿರ ಎಕರೆ ಜಮೀನಿಗೆ ನೀರಿನ ಉಪಯೋಗ ಸಿಗುತ್ತದೆ. ಆ ಭಾಗದ ರೈತರಿಗೆ ಹೆಮ್ಮೆ ತರುವ ವಿಷಯವೇ ಇದಾಗಿದೆ. ಆದುದರಿಂದ ಪಿ.ಎ.ಸಿ. ವರದಿ ಪ್ರಕಾರ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೇ, ಈ ಕಾರಂಜಾ ಯೋಜನೆಯ ಅವ್ಯವಹಾರದಲ್ಲಿ ಅಧಿಕಾರಿಗಳ ಜೊತೆಗೆ ಬಹಳಷ್ಟು ಮಂದಿ ರಾಜಕಾರಣಿಗಳು ಕೂಡ ಇನ್‌ವಾಲ್ವ್ ಆಗಿದ್ದಾರೆ. ಪಿ.ಎ.ಸಿ. ಕಮಿಟಿಯವರು ವರದಿಯಲ್ಲಿ 356 ಕೋಟಿ ರೂಪಾಯಿಗಳು ಖರ್ಚಾಗಿರುವ ಕಡೆ 200 ಕೋಟಿ ರೂಪಾಯಿಗಳ ಅವ್ಯವಹಾರವೇ ಆಗಿದೆಯೆಂದು ತಿಳಿಸಿದ್ದಾರೆ. ಈ ವರದಿ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಏಚಾರಣೆ ಯಾವ ಹಂತದಲ್ಲಿದೆ? ಆ ಅವ್ಯವಹಾರದಲ್ಲಿ ಯಾರ್ಯಾರು ಇನ್‌ವಾಲ್ವ್ ಆಗಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಬಹುಶಃ ನಮ್ಮ ನೀರಾವರಿ ಇಲಾಖೆಯೊಳಗೆ ಅತ್ಯಂತ ಏವಾದ ಹಾಗೂ ಹೆಚ್ಚಿನ ಅವ್ಯವಹಾರದ ಘಟನೆಗಳು ಕಂಡು ಬಂದಿರುವುದು ಈ ಕಾರಂಜಾ ಪ್ರಾಜೆಕ್ಟ್ ಯೋಜನೆಯೊಳಗೇ ಆಗಿದೆ. ಈಗಾಗಲೇ ಸದನ ಸಮಿತಿ ಏನು ವರದಿ ನೀಡಿದೆ ಆ ವರದಿಯ ಆಧಾರದ ಮೇಲೆಯೇ ಜವಾಬ್ದಾರಿಕೆಯನ್ನು ಗುರುತಿಸುವ ಸಲುವಾಗಿ ಇಲಾಖಾ ಏಚಾರಣೆಯನ್ನು ಪ್ರಾರಂಭಗೊಳಿಸಿದ್ದೇವೆ. ಈ ಯೋಜನೆಯಲ್ಲಿ ನಮ್ಮ ಸರ್ಕಾರ ಬಂದ ಮೇಲೆ ಒಟ್ಟು 8 ತನಿಖೆಗಳನ್ನು ಈವರೆಗೆ ಮಾಡಿಸಿದ್ದೇವೆ. ಇದು ಮಾನ್ಯ ಸದಸ್ಯರುಗಳಿಗೂ ತಿಳಿದೇ ಇದೆ. ಪ್ರತಿಯೊಂದು ತನಿಖಾ ವರದಿಯಲ್ಲಿ ಅವ್ಯವಹಾರ ಆಗಿರುವ ಬಗ್ಗೆ ಎಲ್ಲೆಲ್ಲಿ ಎಂದು ತಿಳಿಯಪಡಿಸಲಾಗಿದೆಯೋ ಅಲ್ಲೆಲ್ಲಾ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಇಬ್ಬರ ಮೇಲೆ ಕ್ರಿಮಿನಲ್ ಆ್ಯಕ್ಷನ್ ತೆಗೆದುಕೊಂಡಿದ್ದೇವೆ. ಸುಮಾರು ನಾಲ್ಕಾರು

ಜನರನ್ನು ಅಮಾನತುಗೊಳಿಸಿ ಶಿಸ್ತಿನ ಕ್ರಮವನ್ನು ತೆಗದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಒಟ್ಟಾರೆ ಆ ಯೋಜನೆಯಲ್ಲಿ ಆರ್ಥಿಕ ಶಿಸ್ತನ್ನು ತರತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ಇನ್ನೂ ಹೆಚ್ಚು ಉಗ್ರ ಕ್ರಮ ಏನು ತೆಗದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಆ ಯೋಜನೆಯನ್ನು ಮುಗಿಸಲು ಪ್ರಯತ್ನ ಮಾಡುತ್ತೇವೆ.

ಕೆ.ಆರ್.ಎಸ್. ನಿರ್ಮಾಣದಲ್ಲಿ ಉಪಯೋಗಿಸಿದ ಯಂತ್ರೋಪಕರಣಗಳನ್ನು ಸಂರಕ್ಷಿಸುವ ಬಗ್ಗೆ.

345(3805)

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ(ಶ್ರೀರಂಗಪಟ್ಟಣ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ. ಕೃಷ್ಣರಾಜಸಾಗರ ನಿರ್ಮಾಣದ ಸಮಯದಲ್ಲಿ ಉಪಯೋಗಿಸಿದ ಯಂತ್ರೋಪಕರಣಗಳನ್ನು ಏಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ ಮಾರಾಟ ಮಾಡುವ ಬದಲು ಕೃಷ್ಣರಾಜಸಾಗರ ಸಮೀಪದಲ್ಲಿಯೇ ಒಂದು ಮ್ಯೂಸಿಯಂ ತೆರೆಯುವ ಬಗ್ಗೆ ಕ್ರಮ ಕೈಗೊಳ್ಳಬಹುದಲ್ಲವೇ?

ಇ. ವಿಶ್ವವಿಖ್ಯಾತ ಬೃಂದಾವನ ಗಾರ್ಡನ್ ವೀಕ್ಷಿಸುವವರ ಸಂಖ್ಯೆ ಹೆಚ್ಚಾಗಿದ್ದು, ಮಳೆಯ ಸಂದರ್ಭದಲ್ಲಿ ಪ್ರವಾಸಿಗರು ಮಳೆಯಿಂದ ನೆನೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಹಾಗಿದ್ದಲ್ಲಿ ಶೆಲ್ಟರ್ ನಿರ್ಮಾಣದ ಬಗ್ಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಎಚ್.ಕೆ.ಪಾಟೀಲ್: (ಜಲ ಸಂಪನ್ಮೂಲ ಮಂತ್ರಿಗಳು):

ಅ. ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಅನುಪಯುಕ್ತ ಯಂತ್ರೋಪಕರಣಗಳು ಈಗಾಗಲೇ ಟೆಂಡರ್ ಮೂಲಕ ಏಲೇವಾರಿ ಮಾಡಿದ್ದು, ಈ ಬಾಬ್ತು ಸರ್ಕಾರಕ್ಕೆ ಹಣ ಸಂದಾಯವಾಗಿದೆ. ಆದ್ದರಿಂದ ಯಂತ್ರೋಪಕರಣಗಳ ಮ್ಯೂಸಿಯಂ ತೆರೆದು ಇಡುವ ಪ್ರಸ್ತಾವನೆ ಉದ್ಭವಿಸುವುದಿಲ್ಲ.